


DR.THIPPESWAMY D.S.
Associate Professor &
H. O. D. of Kannada
V M K S R Vastrad Arts,Science And
V. S. Bellihal Commerce College
HUNGUND-587118 Dist Bagalkot

# ನಿರಾಭಾರಿ

## ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳ ಚಿಂತನ: ಮಂಥನ

ಪ್ರಧಾನ ಸಂಪಾದಕರು
**ಡಾ. ಎಸ್. ಟಿ. ಮೇರವಾಡೆ**

ಸಂಪಾದಕರು
**ಡಾ. ಆರ್. ವಿ. ಪಾಟೀಲ,**
**ಡಾ. ಎಂ. ಎಸ್. ಮಾಗಣಗೇರಿ**

೨೦೨೩

ಪ್ರಕಾಶಕರು
**ಸೌಮ್ಯ ಪ್ರಕಾಶನ**
**ಮಹಾಬಳೇಶ್ವರ ಕಾಲೋನಿ, ವಿಜಯಪುರ**

**Nirabhari**

| | | |
|---|---|---|
| Editer-in-Chief | : | Dr. S. T. Merwade |
| Editor | : | Dr. R. V. Patil, Dr. M. S. Maganageri. |
| Publisher | : | Soumya Prakashan BJP-F-27-2012-13<br>Mahabaleswar Colony, Vijayapur |
| © | : | Publishers |
| First Edition | : | December, 2023 |
| Copies | : | 1000 |
| Pages | : | x+173 |
| Price | : | ₹ 150 |
| Book Size | : | Demy 1/8 |
| Paper Used | : | 70 GSM N.S Maplitho |
| ISBN | : | 978-93-83813-59-9 |

■■■

**ನಿರಾಭಾರಿ: ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳ ಚಿಂತನ: ಮಂಥನ**

| | | |
|---|---|---|
| ಪ್ರಧಾನ ಸಂಪಾದಕರು | : | ಡಾ. ಎಸ್. ಟಿ. ಮೇರವಾಡೆ |
| ಸಂಪಾದಕರು | : | ಡಾ. ಆರ್. ವಿ. ಪಾಟೀಲ, ಡಾ. ಎಂ. ಎಸ್. ಮಾಗಣಗೇರಿ |
| ಪ್ರಕಾಶಕರು | : | ಸೌಮ್ಯ ಪ್ರಕಾಶನ ಬಿಜೆಪಿ-ಎಫ್-೨೭-೨೦೧೨-೧೩<br>ಮಹಾಬಳೇಶ್ವರ ಕಾಲೋನಿ, ವಿಜಯಪುರ |
| ಹಕ್ಕುಗಳು | : | ಪ್ರಕಾಶಕರವು |
| ಮೊದಲ ಮುದ್ರಣ | : | ಡಿಸೆಂಬರ್, ೨೦೨೩ |
| ಪ್ರತಿಗಳು | : | ೧೦೦೦ |
| ಪುಟಗಳು | : | x+೧೭೩ |
| ಬೆಲೆ | : | ₹ ೧೫೦ |
| ಪುಸ್ತಕದ ಆಕಾರ | : | ಡೆಮಿ ೧/೮ |
| ಪೇಪರ ಬಳಕೆ | : | ೭೦ ಜಿ.ಎಸ್.ಎಂ., ಎನ್.ಎಸ್. ಮ್ಯಾಪಲಿಥೋ |
| ಮುಖಪುಟ | : | ಆರ್ಟಿಕ್, ಧಾರವಾಡ |
| ಪುಟ ವಿನ್ಯಾಸ | : | ಜಾವೇದ ತಡಕೋಡ, ಧಾರವಾಡ |
| ಮುದ್ರಣ | : | ಲಿಖೀತ್ ಪ್ರಿಂಟರ್ಸ್, ಧಾರವಾಡ |

## ಪರಿವಿಡಿ


ಓದಿನೊಳಗಣ ಪ್ರವೇಶದ ನಿವೇದನೆ

೧. ಗುರು ಮಹಾತ್ಮರು ಶ್ರೀ ಸಿದ್ಧೇಶ್ವರ ಸ್ವಾಮಿಗಳು ೦೧
**– ಡಾ. ಎ. ಸಿ. ವಾಲಿ**

೨. ನಿಜದರಿವಿನಲಿ ನೆಲೆಯಾದವರು ಪೂಜ್ಯ ಸಿದ್ಧೇಶ್ವರ ಶ್ರೀಗಳು ೦೩
**– ಪ್ರೊ. ಎಸ್. ಟಿ. ಮೇರವಾಡೆ**

೩. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು : ವಿಭೂತಿ ಯೋಗ ೦೮
**– ಡಾ. ಕಲ್ಲಯ್ಯ ಎಸ್. ಹಿರೇಮಠ**

೪. ಬಯಲಾಲಯದ ನಾದ ಬಿಂದು
ಕಲಾತೀತ ಶ್ರೀ ಸಿದ್ಧೇಶ್ವರ ಸ್ವಾಮಿಗಳು ೧೮
**– ಡಾ. ಆರ್. ವಿ. ಪಾಟೀಲ**

೫. ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಶ್ರೀಗಳ
ಸಾಮಾಜಿಕ ಚಿಂತನೆಗಳು ೨೭
**– ಡಾ. ಉಷಾದೇವಿ ಹಿರೇಮಠ**

೬ ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ
ಪ್ರವಚನಗಳಲ್ಲಿ– ಆಧ್ಯಾತ್ಮ ೩೩
**– ಡಾ. ಪುಷ್ಪಾ ಬಸನಗೌಡರ**

೭ ಮರೆಯಾದ ಶತಮಾನದ ಸಂತ :
ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ ೪೦
**– ಡಾ. ಎಂ. ಎಸ್. ಮಾಗಣಗೇರಿ**

೮. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ ಪ್ರವಚನಗಳಲ್ಲಿ
ದೈನಂದಿನ ಲಯ ೪೯
**– ಡಾ. ಅನಿತಾ ಎಚ್. ಹಳ್ಳಿಯಾಳ**

೯. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ
ಕಥನಗಳಲ್ಲಿ ಆಧ್ಯಾತ್ಮಿಕತೆ ೬೫
**– ಶಕುಂತಲಾ ಪ್ರ. ಬರಗಿ**

೧೦. ಸಿದ್ಧೇಶ್ವರ ಸ್ವಾಮಿಗಳ ಪ್ರವಚನಗಳಲ್ಲಿ ಸಾಮಾಜಿಕ ಚಿಂತನೆ ೭೨
**– ಡಾ. ಶಿವಲೀಲಾ ಬ. ಉಳ್ಳಾಗಡ್ಡಿ**

೧೧. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರವಚನಗಳಲ್ಲಿನ
ಕೆಲವು ಸಾಂದರ್ಭಿಕ ಕಥೆಗಳ ವಿಶ್ಲೇಷಣೆ ೮೪
**– ಬಿ. ಎಸ್. ಹೆಗಡೆ**

೧೨. ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ ಪ್ರವಚನಗಳಲ್ಲಿ
ಪರಿಸರ ಪ್ರೇಮ ೯೧
**– ಡಾ. ಅಶ್ವಿನಿ ಶಂ. ಬೆಳ್ಳುಂಡಗಿ**

೧೩. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಪ್ರವಚನಗಳಲ್ಲಿ
ಪಾರಮಾರ್ಥಿಕತೆ ೯೮
**– ಡಾ. ತಿಪ್ಪೇಸ್ವಾಮಿ ಡಿ. ಎಸ್.**

೧೪. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಪ್ರವಚನಗಳಲ್ಲಿ
ಸಾಮಾಜಿಕ ಚಿಂತನೆ ೧೦೩
**– ಡಾ. ಹಣಮಂತರಾಯ**

೧೫. ಶ್ರೀ ಸಿದ್ಧೇಶ್ವರ ಸ್ವಾಮಿಗಳ ಜ್ಞಾನ ಯೋಗಾಶ್ರಮ :
ಆಧ್ಯಾತ್ಮಿಕ ಸಂಸ್ಕೃತಿಯ ಕೇಂದ್ರ ೧೧೧
**– ಡಾ. ಎನ್. ಎಸ್. ಕುಸುಗಲ್ಲ**

೧೬. ಪರಮ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿಯವರ
ಪ್ರವಚನಗಳಲ್ಲಿ ತತ್ವಜ್ಞಾನ ೧೧೬
**– ಶ್ರೀಮತಿ ಸುಧಾ ಎಸ್. ಹುಚ್ಚಣ್ಣವರ**

೧೭. ಶ್ರೀ ಸಿದ್ಧೇಶ್ವರ ಶ್ರೀಗಳ ಪ್ರವಚನಗಳಲ್ಲಿ
ಹಣ ಮತ್ತು ಗುಣ : ಒಂದು ಚಿಂತನೆ ೧೨೫
**– ಡಾ. ವಾಯ್. ವಾಯ್. ಕೊಕ್ಕನವರ**

೧೮. ಶ್ರೀ ಸಿದ್ಧೇಶ್ವರ ಮಹಾಸ್ವಾಮಿಯವರ ಪ್ರವಚನಗಳಲ್ಲಿ ಕೃಷಿ ೧೩೩
**– ಡಾ. ಬಸವರಾಜ ಸಂಕೇಶ್ವರ**

# ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳ ಪ್ರವಚನಗಳಲ್ಲಿ ಪಾರಮಾರ್ಥಿಕತೆ

● ಡಾ. ತಿಪ್ಪೇಸ್ವಾಮಿ ಡಿ. ಎಸ್.

ಮಾನವ ಜೀವನದ ಸಾರ್ಥಕತೆ ಇರುವುದೇ 'ದೇವನೊಲುಮೆ' ಯನ್ನು ಗಳಿಸುವುದರಲ್ಲಿ ಆ ಮಹಾದೇವನನ್ನು, ಪರಮಸತ್ಯ ಪರಮಾತ್ಮನನ್ನು ಒಲಿಸಿಕೊಳ್ಳುವುದಕ್ಕಾಗಿ ಬುದ್ಧ, ಬಸವ, ಮಹಾವೀರ ಮೊದಲಾದ ಮಹಾತ್ಮರು ಮಾಡಿದ ತಪಸ್ಸು ಅನುಷ್ಠಾನ, ಅನುಭಾವ ಸಣ್ಣದೇನಲ್ಲ. ದೇವನನ್ನು ಒಲಿಸಿಕೊಳ್ಳುವುದಕ್ಕಾಗಿ ಭಕ್ತಿಯೋಗ, ಜ್ಞಾನಯೋಗ, ರಾಜಯೋಗ ಹೀಗೆ ಹಲವಾರು ಯೋಗಗಳಿವೆ. ಅನೇಕರು ತಮಗಿಷ್ಟವಾದ ಯೋಗ ಮಾರ್ಗದಲ್ಲಿ ಮುನ್ನಡೆದು ದೇವನೊಲುಮೆಗಳಿಸಿ ಧನ್ಯರಾದರು. ಯೋಗವು ಬಹಳ ಸುಂದರ ಶಬ್ದ, ಯೋಗದಿಂದ ನಾವು ಲೌಕಿಕ ಅಲೌಕಿಕವಾದುದನ್ನೆಲ್ಲ ಸಾಧಿಸಬಹುದು. ಯೋಗವು ಸಮರ್ಥ ಸಾಧನ, ದೇಹ, ಮನ, ಬುದ್ಧಿಯನ್ನು ಸದೃಢಗೊಳಿಸುವುದು ಯೋಗ, ಜೀವನದಲ್ಲಿ ಸಾಧಿಸಬೇಕಾದುದನ್ನೆಲ್ಲ ಸಾಧಿಸಿಕೊಡುತ್ತದೆ. ಧರ್ಮವು ಒಬ್ಬರಿಗೆ ಬೇಕಾಗಬಹುದು. ಮತ್ತೊಬ್ಬರಿಗೆ ಬೇಕಾಗದೇ ಇರಬಹುದು. ನಮ್ಮ ಧರ್ಮ, ನಿಮ್ಮ ಧರ್ಮ ಬೇರೆ ಬೇರೆ ಅನಿಸಬಹುದು. ಆದರೆ ಯೋಗವು ಎಲ್ಲರಿಗೂ ಒಂದೇ, ಸಣ್ಣವರು, ದೊಡ್ಡವರು, ಕಲಿತವರು, ಕಲಿಯದವರು, ಸಿರಿವಂತರು, ಬಡವರು ಎಲ್ಲರಿಗೂ ಬೇಕಾದುದು ಯೋಗ ನಿಜವಾದ ಯೋಗವು ವ್ಯಾಪಕ ಸಾಧನ.

ಭಗವದ್ಗೀತೆಯಲ್ಲಿ ಪ್ರತಿಯೊಂದು ಅಧ್ಯಯನಕ್ಕೂ ಯೋಗವೆಂದರು. ಇದು ವ್ಯಾಸಮಹರ್ಷಿ ರಚಿಸಿದ ಸುಂದರ ಗ್ರಂಥ ನಮ್ಮ ದೇಶದಲ್ಲಿ ಭಗವದ್ಗೀತೆಯನ್ನು ಓದುವವರು ಕೋಟಿ ಕೋಟಿ ಜನ ಗೀತೆಯಲ್ಲಿ ಇರುವುದು

ಬಳಿ ಯೋಗ ಜೀವನವೇ ಒಂದು ಯೋಗವಾಗಬೇಕು. ಯೋಗದಿಂದ ನಮ್ಮ ಸಮಗ್ರ ಜೀವನದ ವಿಕಾಸವಾಗುತ್ತದೆ ಎಂದು ಸಿದ್ಧೇಶ್ವರ ಸ್ವಾಮಿಗಳ ವಿಚಾರವಾಗಿದೆ. ನಮ್ಮ ಜೀವನವು ವಿಕಸವಾಗಬೇಕೆಂದು ಎಲ್ಲರೂ ಬಯಸುತ್ತಾರೆ. ಒಂದು ಸಣ್ಣ ಬೀಜ ಇದ್ದರೂ ಸಹಿತ ಅದೂ ಬಯಸುತ್ತದೆ ನಾನೂ ಮೊಳಕೆ ಒಡೆದು ಬೆಳೆಯಬೇಕು. ಹಚ್ಚ ಹಸಿರಾಗಿ ಕಂಗೊಳಿಸಬೇಕು. ಹೂ ಬಿಟ್ಟು ಕಾಯಾಗಿ ಹಣ್ಣಾಗಿ ಜಗದ ಕಣ್ಣಾಗಬೇಕು. ಅಲ್ಲದೆ ಬೀಜದ ಬದುಕು ಸಾರ್ಥಕವಾಯಿತು. ಒಂದು ಮಿಣುಗು ದೀಪವಿದ್ದರೂ ಸಹಿತ ಅದರಲ್ಲಿ ಎಣ್ಣೆಯ ಕೊನೆಯ ಹನಿ ಇರುವವರೆಗೆ ನಾನು ಉರಿದು ಜಗತ್ತಿಗೆ ಬೆಳಕು ಕೊಡಬೇಕು ಎನ್ನುತ್ತದೆ ಎಂದು ಸಿದ್ಧೇಶ್ವರ ಸ್ವಾಮಿಗಳು ತಮ್ಮ ಪ್ರವಚನದಲ್ಲಿ ಹೇಳುವರು.

ನಾವೂ ಕೂಡಾ ನಮ್ಮ ಜೀವನದಲ್ಲಿ ಸಾಧ್ಯವಿರುವುದನ್ನೆಲ್ಲ ಸಾಧಿಸಬೇಕು. ಹೂವಾಗಿ ಅರಳಿ, ಸಂತಸದ ಸುಗಂಧ ಸೂಸಬೇಕು. ಮರವಾಗಿ ಬೆಳೆದು ಅನುಭವದ ಫಲ ನೀಡಬೇಕು. ಜ್ಯೋತಿಯಾಗಿ ಬೆಳಗಿ ಆನಂದದ ಬೆಳಕು ನೀಡಬೇಕು. ಅಪರೂಪದ ಅವಕಾಶ ಮಾನವ ಜನ್ಮದಲ್ಲಿ ಸಿಕ್ಕಿರುವಾಗ ನಾವೇಕೆ ಬೆಳೆಯಬಾರದು ಎಂದು ಛಲವಿರಬೇಕು. ಮಹಾತ್ಮ ಗಾಂಧೀಜಿಯವರು ಚಿಕ್ಕವರಿದ್ದಾಗ ಹಲವಾರು ತಪ್ಪುಗಳನ್ನು ಮಾಡಿಯೇ ಬೆಳೆದರು. ದೇಶಭಕ್ತಿ ಹಾಗೂ ದೇಶಪ್ರೇಮದ ಸಾಧನೆ ಮಾಡಿ ವಿಶ್ವವಿಖ್ಯಾತರಾಗಿ ಬೆಳೆದು ಮಹಾತ್ಮರೆನಿಸಿದರು. ವಿನೋಬಾ ಭಾವೆಯವರು ಬಿ. ಎ. ಪದವಿಯನ್ನು ಮುಗಿಸಿರಲಿಲ್ಲ. ಶಾಲೆಯನ್ನು ಬಿಟ್ಟು ಹೊರಗೆ ಬಂದರು. ದೇಶ ಸೇವೆಗೆ ನಿಂತರು. ಪಾದಯಾತ್ರೆಯ ಮೂಲಕ ಅಖಂಡ ಭಾರತವನ್ನು ಹದಿನಾಲ್ಕು ವರ್ಷ ಸುತ್ತಿ ಭೂದಾನಯಜ್ಞ ಮಾಡಿ ಬಡವರಿಗೆ ಭೂಮಿಯನ್ನು ಕೊಡಿಸಿದರು. ಬಡವರ ಭಾಗ್ಯದೇವತೆ ಎನಿಸಿದರು. ಸಾಧನೆಯಿಂದ ಮನುಷ್ಯ ಏನೆಲ್ಲ ಸಾಧಿಸಬಹುದು ಎನ್ನುವುದಕ್ಕೆ ಸಾಕ್ಷಿಯಾಗಿ ನಿಂತರು. ನಮ್ಮ ಬದುಕಿನ ಸಮಗ್ರ ವಿಕಾಸಕ್ಕೆ ಇರುವ ಸುಂದರ ಸಾಧನವೆಂದರೆ ಯೋಗ. ನಾವು ನಡೆಯುವುದು, ನುಡಿಯುವುದು, ಹೇಳುವುದು, ಕೇಳುವುದು ಎಲ್ಲವೂ ಯೋಗವಾಗಬೇಕು. ಅರವಿಂದ ಮಹರ್ಷಿಗಳು ನಮ್ಮ ಜೀವನವೇ ಒಂದು ಯೋಗವಾಗಬೇಕೆಂದು ಹೇಳುತ್ತಾರೆ. ಭಗವದ್ಗೀತೆಯಲ್ಲಿ ಮೊದಲನೇ ಅಧ್ಯಾಯ ವಿಷಾದ ಯೋಗದಿಂದ

ಹಿಡಿದು ಹದಿನೈದು ಅಧ್ಯಾಯಗಳೆಲ್ಲ ಯೋಗಗಳೆಂದೇ ಹೇಳಿದೆ. ಭಾರತೀಯ ಬಹುದೊಡ್ಡ ಜಾಗತಿಕ ಕಾಣಿಕೆ ಈ ಭಗವದ್ಗೀತೆ. ಇದು ನಡೆಯುವುದು ಯೋಗವಾದರೆ ನಡೆದು ಪಡೆಯುವುದು ಯೋಗವೇ ಶಾಲೆಯನ್ನು ದೊರಕಿಸಿಕೊಡುವುದು ಶಾಂತಿಯೋಗ, ಧನವನ್ನು ಕೊಡುವುದು ಧನಯೋಗ ಹಾಗೇ ಅಧಿಕಾರ ಯೋಗ, ಪುತ್ರಯೋಗ, ಮಿತ್ರಯೋಗ ಜೀವನವೇ ಯೋಗ ಎಂದ ಸ್ವಾಮಿಗಳು ತಮ್ಮ ಪ್ರವಚನದಲ್ಲಿ ಹೇಳುವರು.

ಹೂವನ್ನು ಎಸೆದರೆ ಕರ್ಮ, ಹೂವನ್ನು ಒಲವಿನಿಂದ ನೀಡಿದರೆ ಕರ್ಮಯೋಗ. ಕಸಗುಡಿಸುವುದು, ಪರಿಸರ ನಿರ್ಮಲವಾಗಿ ಇಡುವುದು ಎಲ್ಲವೂ ಯೋಗವೇ ಅದಕ್ಕೆಂದೇ ಬಸವಣ್ಣನವರ

**ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮ ದೇವನೆಂತೊಲಿವನಯ್ಯ?**

ನಮ್ಮ ಮಾತು ಮುತ್ತಿನ ಹಾರದಂತೆ ಸುಂದರವಾಗಿ, ಮಾಣಿಕ್ಯದ ದೀಪ್ತಿಯಂತೆ ಪ್ರಕಾಶಮಾನವಾಗಿ, ಸ್ಫಟಿಕದ ಸಲಾಕೆಯಂತೆ ಶುಭ್ರವಾಗಿರಬೇಕು. ಅಷ್ಟೇ ಅಲ್ಲ ನಮ್ಮ ಮಾತು ಆ ಮಹಾದೇವನೇ ಮೆಚ್ಚಿ ಅಹುದಹುದು ಎಂದು ತಲೆದೂಗುವ ಹಾಗೆ ಇರಬೇಕು ಎಂದಿರುವರು. ಬಸವಣ್ಣನವರು ಅವರೇ 'ಅಯ್ಯಾ ಎಂದರೆ ಸ್ವರ್ಗ' 'ಎಲವೋ ಎಂದಡೆ ನರಕ' ಎಂದು ತಮ್ಮ ಇನ್ನೊಂದು ವಚನದಲ್ಲಿ ಹೇಳಿರುವರು. ಅಯ್ಯಾ ಅಣ್ಣ ಎಂಬ ಮೃದುವಾದ ಮಾತು ಸ್ವರ್ಗವನ್ನೇ ನಿರ್ಮಿಸುತ್ತದೆ. 'ಎಲವೋ' ಎಂತೋ ಏನೋ ಎಂಬ ಕಠೋರವಾದ ಮಾತು ನರಕವನ್ನೇ ನಿರ್ಮಿಸುತ್ತದೆ. ಇದರಿಂದ ಮಾತಿನಲ್ಲಿ ಅದೆಂಥ ಅದ್ಭುತವಾದ ಶಕ್ತಿ ಇದೆ ಎಂಬುದು ತಿಳಿದು ಬರುತ್ತದೆ. ಅಂತೆಯೇ ಬಸವಣ್ಣನವರು ಮುಗಿದ ಕೈ ಬಾಗಿದ ತಲೆಯಾಗಿರಿಸು ಎಂದು ದೇವರಲ್ಲಿ ಪ್ರಾರ್ಥಿಸಿದರು. ಮಾತು ಬಾರದೇ ನಾವು ಮೂಕರಾಗಿದ್ದರೆ ಮಾತಿನ ಬೆಲೆ ಎಷ್ಟೆಂದು ತಿಳಿಯುತ್ತಿತ್ತು. ಅಲ್ಲವೇ ಪ್ರಪಂಚದ ತುಂಬ ಜ್ಞಾನಗಂಗೆ ಹರಿದಾಡುವಂತೆ ಮಾಡಿದ ಮಾತು

ನಿಜವಾಗಿಯೂ ಅಮೂಲ್ಯ, ಇದು ಧ್ಯಾನ ಮತ್ತು ಯೋಗ ಸಂಕೇತವಾಗಿರುತ್ತದೆ. ಅನ್ಯರ ಮನೆಗೆ ಹೋದ ಅಳಿಯ, ಅತಿಥಿ ಮೊದಲಾದವರು ತಿರುಗಿ ಬರುವ ತಯಾರಿಯಲ್ಲಿದ್ದರೆ ಇನ್ನೂ ನಾಲ್ಕು ದಿನ ಇರಲು ಹೇಳುತ್ತಾರೆ. ಇಲ್ಲದಿದ್ದರೆ ಕಳುಹಿಸುವ ವ್ಯವಸ್ಥೆ ಯಾರಿಗೂ ಗೊತ್ತಾಗದಂತೆ ಮಾಡುತ್ತಾರೆ. ಈ ಜಗತ್ತಿನಲ್ಲಿಯೂ ಕೂಡಾ ಅಷ್ಟೇ ಹೋಗುವ ತಯಾರಿಯಲ್ಲಿದ್ದವರನ್ನು ಜನರು ದೇವರಂತೆ ಕಾಣುತ್ತಾರೆ. ಅದು ಸನ್ಯಾಸ ಯೋಗದ ಮಹತ್ವ

ಇಂತಹ ಜೀವನಯೋಗ ಸಾಧನೆ ಮಾಡಬೇಕೆಂಬುವವರಲ್ಲಿ ಇರಬೇಕಾದ ಮೂರು ಲಕ್ಷಣಗಳನ್ನು ಗೀತೆಯ ಜ್ಞಾನ ವಿಜ್ಞಾನ ಯೋಗದಲ್ಲಿ ತುಂಬಾ ಸೊಗಸಾಗಿ ಸಿದ್ಧೇಶ್ವರ ಮಹಾಸ್ವಾಮಿಗಳು ಹೇಳುವರು.

**ಮಯ್ಯಾಸಕ್ತ ಮನಾಃ ಪಾರ್ಥ ಯೋಗಂ**
**ಯುಂಜನ್ಮದಾಶ್ರಯಃ । ಗೀತೆ**

ಯೋಗಿಯ ಮೂರು ಲಕ್ಷಣಗಳೆಂದರೆ

(೧) ಆಸಕ್ತಿ (೨) ತನ್ಮಯತೆ (೩) ದೃಢನಿಶ್ಚಯ

**ಆಸಕ್ತಿ** : ಆಸಕ್ತಿಗೆ ಅಕ್ಕಮಹಾದೇವಿಯವರು ಜೀವನವೇ ದಿವ್ಯಸಾಕ್ಷಿ ಅಕ್ಕಮಹಾದೇವಿಯವರಿಗೆ ದೇವರಲ್ಲಿ ಅದೆಂಥ ಅಗಾಧವಾದ ಪ್ರೇಮವೆಂದರೆ ಅದನ್ನು ಅವರ ವಚನದಲ್ಲಿಯೇ ನಾವು ಹೀಗೆ ನೋಡಬಹುದು.

**ಗಿರಿಯಲಲ್ಲದೆ ಹುಲ್ಲು ಮೊರಡೆಯಲ್ಲಾಡುವುದೇ ನವಿಲು?**
**ಕೊಳನಲ್ಲದೆ ಕಿರಿವಳ್ಳಕ್ಕೆಳಸುವುದೆ ಹಂಸ?**
**ಮಾಮರ ತಳಿತಲ್ಲದೆ ಸ್ವರಗೈಯುವುದೇ ಕೋಗಿಲೆ?**
**ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?**
**ಎನ್ನದೇವ ಚನ್ನಮಲ್ಲಿಕಾರ್ಜುನಗಲ್ಲದೆ ಅನ್ಯಕ್ಕೆಳಸುವುಮದೇ**
**ಎನ್ನ ಮಗ? ಪೇಳಿರೇ ಕೆಳದಿಯಾರಿದಾ?**

ನವಿಲು ಗಿರಿಯಲ್ಲಲ್ಲದೆ ಹುಲ್ಲ ಮೊರಡಿಯಲ್ಲಿ ಎಂದೂ ಆಡುವುದಿಲ್ಲ. ಕೋಗಿಲೆ ಮಾಮರವಿಲ್ಲದೆ ಹಾಡುವುದಿಲ್ಲ. ಹಂಸವು ಸರೋವರವಲ್ಲದೆ ಕಿರುಹಳ್ಳಕ್ಕೆ ಹೋಗುವುದಿಲ್ಲ. ಹಾಗೇ ಅಕ್ಕಮಹಾದೇವಿ ತನ್ನ ಮನಸ್ಸು ಮಹಾದೇವನಲ್ಲದೆ

ಅನ್ಯ ವಿಷಯಕ್ಕೆ ಎಳೆಸುವುದಿಲ್ಲ ಎನ್ನುತ್ತಾರೆ. ಜೇನುಹುಳುವಾದರೂ ಎದ್ದರೂ ಕೂತರೂ ಮಕರಂದವನ್ನೇ ಧ್ಯಾನಿಸುತ್ತದೆ. ಇದೇ ನಿಜವಾದ ಆಸಕ್ತಿ.

**ತನ್ಮಯತೆ:** ತನ್ಮಯತೆಗೆ ಮಕ್ಕಳ ಜೀವನವೇ ಸಾಕ್ಷಿ. ಮನೆಯಲ್ಲಿ ನೂರು ಆಟಿಕೆಗಳಿದ್ದರೂ ತಮಗಿಷ್ಟವಾದ ಒಂದರಲ್ಲಿಯೇ ಅವರು ತನ್ಮಯವಾದರೆ ಪ್ರಪಂಚವನ್ನೇ ಮರೆಯುತ್ತಾರೆ.

**ದೃಢ ನಿಶ್ಚಯ:** ಅದೇ ರೀತಿ ಮೂರನೇಯದಾದ ಯೋಗದ ಲಕ್ಷಣವೆಂದರೆ ದೃಢ ನಿಶ್ಚಯ ತೃಣಮಾತ್ರವೂ ಸಂಶಯವಿಲ್ಲದೆ ಸಾಧಕವು ತನ್ನ ಮಾರ್ಗದಲ್ಲಿ ಮುನ್ನಡೆದರೆ ಅವನು ನಿಶ್ಚಿತವಾಗಿಯೂ ತನ್ನ ಗುರಿಯನ್ನು ತಲುಪುತ್ತಾನೆ. ಪರಮಶಾಂತಿಯನ್ನು ಪಡೆಯುತ್ತಾನೆ. ಅದೇ ಜೀವನ್ಮುಕ್ತಿ ಇಂತಹ ಪರಮೋನ್ನತ ಪದವಿಯನ್ನು ಕರುಣಿಸುವ ಆಸಕ್ತಿ, ತನ್ಮಯತೆ, ದೃಢನಿಶ್ಚಯ ಇವುಗಳಿಗೆ ಸಾಧನಾತ್ರಯ ಎನ್ನುತ್ತಾರೆ.

<u>ಆಧಾರ ಗ್ರಂಥಗಳು</u>

೧) ಪರಮಾನಂದ ಬೋಧೆ : ಶ್ರೀ ಸಿದ್ಧೇಶ್ವರ ಸ್ವಾಮೀಜಿ
೨) ಶ್ರದ್ಧಾನಂದ ಸ್ವಾಮಿಗಳು : ದೇವನೊಲುವೆ ಶ್ರೀ ಸಿದ್ಧೇಶ್ವರ ಸ್ವಾಮೀಜಿ
೩) ಶ್ರದ್ಧಾನಂದ ಸ್ವಾಮಿಗಳು : ಆನಂದ ಯೋಗ
೪) ಶ್ರದ್ಧಾನಂದ ಸ್ವಾಮಿಗಳು : ಜ್ಞಾನ, ವಿಜ್ಞಾನಯೋಗ

ಡಿ.ಎಸ್. ಸಹ ಪ್ರಾಧ್ಯಾಪಕರು, ವ್ಹಿ.ಎಮ್.ಕೆ.ಎಸ್.ಆರ್.ವ್ಹಿ. ಪದವಿ ಮಹಾವಿದ್ಯಾಲಯ, ಹುನಗುಂದ-೫೮೭೧೧೮, ಮೊ.ನಂ: ೭೬೭೬೬೫೮೨೬೫೫

1999 ರಲ್ಲಿ ಕೇವಲ ಏಳು ವಿದ್ಯಾರ್ಥಿಗಳಿಂದ ಆರಂಭವಾದ ವಿಜಯಪುರದ ಚಾಣಕ್ಯ ಕರಿಯರ್ ಅಕಾಡೆಮಿಯು ಇಂದು ನಾಡಿನಾದ್ಯಂತ ಹೆಸರುವಾಸಿಯಾಗಿದೆ. ಶಿಕ್ಷಣ ತಜ್ಞರಾದ ಶ್ರೀ ಎನ್.ಎಂ. ಬಿರಾದಾರ ಅವರ ನೇತೃತ್ವದಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತ ಬಂದಿರುವ ಈ ಅಕಾಡೆಮಿಯಲ್ಲಿ ಇಪ್ಪತ್ತೈದು ಸಾವಿರಕ್ಕಿಂತಲೂ ಹೆಚ್ಚು ಅಭ್ಯರ್ಥಿಗಳು ಸರಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಸ್ಥೆಯು ವಿದ್ಯಾರ್ಥಿಗಳಿಗೆ ಕೇವಲ ಶಿಕ್ಷಣವನ್ನು ಅಷ್ಟೇ ಕೊಟ್ಟಿಲ್ಲ ಸಂಸ್ಕಾರವನ್ನು, ಜೀವನಪ್ರೀತಿಯನ್ನು ಕಲಿಸಿಕೊಟ್ಟಿರುವುದು ಈ ಸಂಸ್ಥೆಯ ಹೆಗ್ಗಳಿಕೆಯಾಗಿದೆ.

ನಾಡಿನಲ್ಲಿ ನಡೆಯುವ ಅನೇಕ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ತನು-ಮನ-ಧನದಿಂದ ಸಹಾಯ ನೀಡುವ ಔದಾರ್ಯದ ಮನಸ್ಸುಳ್ಳ ಶ್ರೀ ಎನ್.ಎಂ. ಬಿರಾದಾರ ಅವರು 2022-23ನೇಯ ಶೈಕ್ಷಣಿಕ ಸಾಲಿನಲ್ಲಿ ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜನೆಯ ಅಡಿಯಲ್ಲಿ ಚಾಣಕ್ಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯವನ್ನು ಪ್ರಾರಂಭಿಸಿದರು. ಶೈಕ್ಷಣಿಕ ವಾತಾವರಣ ಉತ್ತಮ ಶಿಕ್ಷಣಕ್ಕೆ ಬೇಕಾದ ತಂತ್ರಜ್ಞಾನಯುಕ್ತ ತರಗತಿಗಳು, ಅಧ್ಯಯನಶೀಲ ಪ್ರಾಧ್ಯಾಪಕರು ಹಾಗೂ ಕ್ರೀಯಾಶೀಲ ಸಿಬ್ಬಂದಿಗಳು, ಓದಿಗೆ ಅನುಕೂಲವಾಗುವ ಭವ್ಯ ಕಟ್ಟಡ, ಮಾಹಿತಿ ತಂತ್ರಜ್ಞಾನವುಳ್ಳ ಗ್ರಂಥಾಲಯದೊಂದಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಬೌದ್ಧಿಕ ಶ್ರೇಯೋಭಿವೃದ್ಧಿಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿರುವರು. ವಿದ್ಯಾರ್ಥಿಗಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಪದವಿಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಮಹಾವಿದ್ಯಾಲಯವು ಇದಾಗಿದೆ.

ಸೌಮ್ಯ ಪ್ರಕಾಶನ
ವಿಜಯಪುರ

9789383813599

